International Journal of Academic Research
ISSN: 2348-7666; Vol.9, Issue-2(1), February, 2022
Impact Factor: 6.023; Email: drtvramana@yahoo.co.in

# ಬುದ್ಧಚರಣದ ದೀಕ್ಷಾಕಾಂಡ – ಒಂದು ಅವಲೋಕನ

**ತನುಜ ಎಂ.** ಮತ್ತು **ಡಾ. ಬಿ. ಪ್ರಭುಸ್ವಾಮಿ**

ಸಂಶೋಧನಾರ್ಥಿ : ಸಹಾಯಕ ಪ್ರಾಧ್ಯಾಪಕರು
ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ವಿಭಾಗ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು,ಮೈಸೂರು.

ಮಹಾಕಾವ್ಯ ಪ್ರಕಾರದಲ್ಲಿ ಇತ್ತೀಚಿನ ಪ್ರಮುಖವಾದ ಕೃತಿ ಎಚ್.ಎಸ್. ವೆಂಕಟೇಶಮೂರ್ತಿ ಅವರ ಬುದ್ಧಚರಣ. ಇಲ್ಲಿ ಬುದ್ಧನ ಜೀವನ ಚಿತ್ರಣದೊಂದಿಗೆ ಅವನಿಂದ ಜೀವನೋತ್ಸಾಹ ತುಂಬಿಕೊಂಡ ವ್ಯಕ್ತಿತ್ವಗಳ ಅನಾವರಣವಿದೆ. ಈ ನಿಟ್ಟಿನಲ್ಲಿ ಈ ಮಹಾಕಾವ್ಯದ ಅಧ್ಯಾಯವೊಂದಾದ ದೀಕ್ಷಾಕಾಂಡದಲ್ಲಿ ಬುದ್ಧನು ತನ್ನ ಜ್ಞಾನೋದಯದ ತರುವಾಯ ಹಲವರಿಗೆ ಬೆಳಕು ನೀಡಿ ಉದ್ಧರಿಸುವ ಮೂಲಕ ಅವರ ಚೇತನಗಳನ್ನು ಜಾಗೃತಗೊಳಿಸುತ್ತಾನೆ. ಬುದ್ಧನ ಮಾತುಗಳಿಂದ ಪ್ರಭಾವಿತರಾಗಿ ಆ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಬದುಕನ್ನು ಹಸನುಗೊಳಿಸಿಕೊಂಡ ವ್ಯಕ್ತಿತ್ವಗಳ ಚಿತ್ರಣ ಈ ಕಾಂಡದಲ್ಲಿದೆ.

**ಮುಖ್ಯ ಪದಗಳು:**

| | | | |
|---|---|---|---|
| ಬುದ್ಧ | ರಾಹುಲ | ಯಶೋಧರೆ | ಶುದ್ಧೋದನ |
| ಆಮ್ರಪಾಲಿ | ಅಂಗುಲೀಮಾಲ | ಕಿಸಾಗೌತಮಿ | ವೈರಾಗ್ಯ |
| ಬಿಕ್ಕು | ಬಿಕ್ಕುಣಿ | ಸಮಾನತೆ | ಸಿದ್ಧಿ |

ಸಹೃದಯನಿಗೆ ಆನಂದಾನುಭವವನ್ನು ನೀಡುವುದರ ಜೊತೆಗೆ ಉಪದೇಶವನ್ನು ನೀಡುವ, ಸ್ಫೂರ್ತಿಯನ್ನು ತುಂಬುವ ಸಾಹಿತ್ಯ ಪ್ರಕಾರಗಳಲ್ಲಿ ಮಹಾಕಾವ್ಯ ಪ್ರಕಾರವೂ ಒಂದು. ಈ ಪರಂಪರೆ ೨೧ನೆಯ ಶತಮಾನದಲ್ಲಿಯೂ ಯಶಸ್ವಿಯಾಗಿ ಮುಂದುವರೆಯುತ್ತಿರುವುದು ಓದುಗ ವಲಯದ ಆಸಕ್ತಿಯ ದ್ಯೋತಕವಾಗಿದೆ. ಜಗತ್ತಿನ ವಿಭೂತಿಪುರುಷರ ಜೀವನಗಾಥೆಯು ಬಹುಪಾಲು ಮಹಾಕಾವ್ಯಗಳ ವಸ್ತುವಾಗಿರುವುದನ್ನು ಗಮನಿಸಬಹುದು. ಈ ನಿಟ್ಟಿನಲ್ಲಿ ಬೌದ್ಧಧರ್ಮದ ಸ್ಥಾಪಕನಾದ, ಜಗತ್ತಿಗೆ ಶಾಂತಿ–ಅಹಿಂಸೆಯನ್ನು ಬೋಧಿಸಿದ ಗೌತಮಬುದ್ಧನ ಜೀವನಚರಿತ್ರೆಯ ಕುರಿತ ಹಾಗೆ ಸಾಕಷ್ಟು ಸೃಜನ–ಸೃಜನೇತರ ಕೃತಿಗಳು ರಚನೆಗೊಂಡಿವೆ. ಸೃಜನಸಾಹಿತ್ಯ ಪ್ರಕಾರಗಳಲ್ಲೊಂದಾದ ಮಹಾಕಾವ್ಯದ ವಸ್ತುವಾಗಿ ಕಾವ್ಯಕ್ಕೆ ಜೀವಂತಿಕೆಯನ್ನು ತಂದುಕೊಡುವ ಮೂಲಕ ಬುದ್ಧ ಜನಮನದಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾನೆ.

ಬುದ್ಧನ ಕುರಿತಾಗಿ ಹೊರಬಂದಿರುವ ಹಲವು ಮಹಾಕಾವ್ಯಗಳಲ್ಲಿ ಇತ್ತೀಚೆಗೆ ಬಿಡುಗಡೆಗೊಂಡಿರುವ ಎಚ್.ಎಸ್. ವೆಂಕಟೇಶಮೂರ್ತಿ ಅವರ "ಬುದ್ಧಚರಣ"ವು ಪ್ರಮುಖವಾದುದು. ಇದರಲ್ಲಿ ಒಟ್ಟು ಎಂಟು ಅಧ್ಯಾಯಗಳಿದ್ದು, ಪ್ರತಿಯೊಂದು ಅಧ್ಯಾಯವನ್ನು **'ಕಾಂಡ'** ಎಂದು ಕರೆದಿದ್ದಾರೆ. ಈ ಕಾವ್ಯದಲ್ಲಿ ಬುದ್ಧನ ಜೀವನದ ಸಂಪೂರ್ಣ ಚಿತ್ರಣ ಎಳೆಎಳೆಯಾಗಿ ಬಿತ್ತರಗೊಂಡಿದೆ. ಈ ಮಹಾಕಾವ್ಯವನ್ನು ರಚಿಸುತ್ತಿರುವ ಉದ್ದೇಶ ಹಾಗೂ ಅದಕ್ಕೆ ಒದಗಿದ ಪ್ರೇರಣೆಯಿಂದ 'ಆರಂಭಕಾಂಡ'ವು ಪ್ರಾರಂಭವಾಗಿ ಕೊನೆಗೆ ಬುದ್ಧನ ನಿರ್ವಾಣದವರೆಗೂ ಹಂತ-ಹಂತವಾಗಿ ಬಿತ್ತರಗೊಳ್ಳುತ್ತಾ ಸಾಗುತ್ತದೆ. ಅವುಗಳಲ್ಲಿ ಬುದ್ಧ ತಾನು ಸಿದ್ಧಿಸಿಕೊಂಡ ಸಾಧನೆಯನ್ನು ಜನರ ಮನಸ್ಸಿಗೆ ನಾಟುವಂತೆ, ಜನರು ವ್ಯಾಮೋಹವನ್ನು ಜಯಿಸಿ ಶಾಂತಿಯನ್ನು ಪಡೆದುಕೊಳ್ಳುವಂತೆ ಉಪದೇಶ ನೀಡುವ ಸಂದರ್ಭ ಹಾಗೂ ಆತನಿಂದ ದೀಕ್ಷೆಯನ್ನು ಪಡೆದು ಜೀವನವನ್ನು ಸಾರ್ಥಕಗೊಳಿಸಿಕೊಳ್ಳುವ ಹಲವರ ಚಿತ್ರಣ "ದೀಕ್ಷಾಕಾಂಡ" ಎಂಬ ಭಾಗದಲ್ಲಿ ವಿಸ್ತೃತವಾಗಿ ಬಿತ್ತರಗೊಂಡಿದೆ. ಈ ಭಾಗದಲ್ಲಿ ಬುದ್ಧನ ಕಾರುಣ್ಯದೃಷ್ಟಿ ಸಕಲಜೀವಿಗಳ ಮೇಲೂ ಹೇಗೆ ಸಮವಾಗಿ ಬೀರಿದೆ ಎಂಬುದು ಗಮನಾರ್ಹವಾಗುತ್ತದೆ. ಕಾರುಣ್ಯಮೂರ್ತಿಯಾದ ಬುದ್ಧ ದುಃಖಿತರನ್ನು ಸಂತೈಸುವಲ್ಲಿ ಹಾಗೂ ಕ್ರೂರಿಗಳನ್ನು ಪರಿವರ್ತಿಸುವಲ್ಲಿ ಸಾರ್ಥಕತೆಯನ್ನು ಕಾಣುತ್ತಾನೆ.

ಬುದ್ಧನ ಬೋಧನೆಗಳಿಂದ ಪ್ರಭಾವಿತರಾಗಿ ತಮ್ಮೊಳಗಿನ ಕ್ಲೇಶಗಳನ್ನು ಕಳೆದುಕೊಂಡು ಸನ್ಮಾರ್ಗದೆಡೆಗೆ ಸಾಗಿದವರು ಹಲವರು. ಆ ದಿಸೆಯಲ್ಲಿ ಯಶೋಧರೆ, ರಾಹುಲ, ಆಮ್ರಪಾಲಿ, ಅಂಗುಲೀಮಾಲ ಮುಂತಾದ ವ್ಯಕ್ತಿಗಳು ತಮ್ಮನ್ನು ಬದಲಾವಣೆಯ ಮೂಸೆಗೆ ಒಡ್ಡಿಕೊಳ್ಳುವುದರ ಮೂಲಕ ತಮ್ಮತನವನ್ನು ಔನ್ನತ್ಯಕ್ಕೆ ಏರಿಸಿಕೊಂಡು ಇತರರಿಗೆ ಮಾದರಿಯಾಗಿದ್ದಾರೆ. ಇಂತಹ ಹಲವು ಚೇತನಗಳ ಚಿತ್ರಣ ಪ್ರಸ್ತುತ ದೀಕ್ಷಾಕಾಂಡದಲ್ಲಿದೆ.

**ಕಪಿಲವಸ್ತುವಿನ ಮುಗ್ಧರ ನೋಟದಲ್ಲಿ ಬುದ್ಧ**

ಜ್ಞಾನೋದಯದ ತರುವಾಯ ಬುದ್ಧನು ತನ್ನ ದಿವ್ಯ ಸಂದೇಶವನ್ನು ಜನರಿಗೆ ಉಪದೇಶಿಸುತ್ತಾ ಅವರನ್ನು ಉದ್ಧರಿಸುತ್ತಿರಬೇಕಾದರೆ, ಕಪಿಲವಸ್ತುವಿನಲ್ಲಿ ತನ್ನ ಕುಟುಂಬವರ್ಗದವರನ್ನು ಸಂತೈಸಿ ಸನ್ಮಾರ್ಗ ತೋರಿಸಬೇಕೆಂದು ಮನದಲ್ಲಿಯೇ ನಿರ್ಧರಿಸಿರುತ್ತಾನೆ. ಅದೇ ಸಂದರ್ಭದಲ್ಲಿ ರಾಹುಲನ ಕೋರಿಕೆಯ ಮೇರೆಗೆ ತನ್ನ ಹುಟ್ಟೂರಿಗೆ ಮರಳಿ ಬರುತ್ತಾನೆ. ತನ್ನ ಅಗಲಿಕೆಯಿಂದ ಕೊರಗುತ್ತಿರುವ ತನ್ನ ಪತ್ನಿ-ಪುತ್ರ, ತಂದೆ-ತಾಯಿ ಹಾಗೂ ಸಮಸ್ತ ಜನರಿಗೆ ಅರಿವಿನ ಬೆಳಕನ್ನು ಮೂಡಿಸಬೇಕೆಂಬ ಅಭಿಲಾಷೆ ಅವನದಾಗಿರುತ್ತದೆ. ಆತ ಕಪಿಲವಸ್ತುವಿಗೆ ಬರುವ ಸುದ್ದಿ ಊರಿಗೆಲ್ಲಾ ಹರಡಿ ಅಲ್ಲಿ ಹಬ್ಬದ ಸಂಭ್ರಮ ಮನೆ ಮಾಡಿರುತ್ತದೆ. ಸಿದ್ಧಾರ್ಥನಾಗಿ ತೆರಳಿದ ಅರಗುವರ, ಜ್ಞಾನಾರ್ಜಿತನಾಗಿ ಗೌತಮ ಬುದ್ಧನಾಗಿ ತಮ್ಮ ಊರನ್ನು ಉದ್ಧರಿಸಲು ಬರುತ್ತಿರುವನೆಂಬ ಪುಣ್ಯಭಾವನೆ ಎಲ್ಲರ ಮನದಲ್ಲಿಯೂ ಮೂಡಿರುತ್ತದೆ. ಆತ

ಕಪಿಲವಸ್ತುವಿಗೆ ಬಂದಾಗ, ಆತನನ್ನು ನೋಡಿದ ಜನರ ಪ್ರತಿಕ್ರಿಯೆಯು ಹೇಗಿರುತ್ತದೆ ಎಂಬ ವರ್ಣನೆಯೊಂದಿಗೆ ದೀಕ್ಷಾಕಾಂಡವು ಪ್ರಾರಂಭವಾಗುತ್ತದೆ.

ಅರಸನಾಗಿದ್ದ ಸಿದ್ಧಾರ್ಥ ಬೋಧಿಯನ್ನು ಪಡೆದು ಬುದ್ಧನಾಗಿದ್ದಾನೆ. ಬುದ್ಧನಾಗುವುದು ಎಂದರೆ ಅದೊಂದು ಅಸಾಮಾನ್ಯ ಸಾಧನೆ. "ಬುದ್ಧ ಎನ್ನುವುದು ಒಂದು ಕಲ್ಪನೆ, ಒಂದು ಸಂಕೇತ, ಒಂದು ಧ್ಯೇಯ, ಒಂದು ಆದರ್ಶ. ಪ್ರತಿಯೊಬ್ಬನಲ್ಲೂ ಬುದ್ಧನ ಬೀಜ ಇದೆ; ಅದು ಬೆಳೆದು ಮರವಾಗಬೇಕಾದರೆ ಸಂಬೋಧಿ ಒದಗಬೇಕು; ಸಂಬೋಧಿ ಒದಗಲು ಸಾಧನೆಯ ಅಗತ್ಯವಿದೆ. ಸಾಧನೆಗೆ ತಕ್ಕ ಸಿದ್ಧತೆಯೂ ಬೇಕು..."[೧] ಈ ರೀತಿ ಸಾಧನೆಗೈದು ಬುದ್ಧನಾದವನು ಸಿದ್ಧಾರ್ಥ. ಅಂತಹ ಬುದ್ಧ ಕಪಿಲವಸ್ತುವಿನ ರಾಜಬೀದಿಯಲ್ಲಿ ಬರುತ್ತಿದ್ದಾನೆ. ಇದನ್ನು ಕಂಡ ಆ ಪುರಜನರ ಮನಸ್ಸಿನಲ್ಲಿ ನಾನಾ ರೀತಿಯ ಭಾವನೆಗಳು ಮೂಡುತ್ತವೆ. ಆತನ ಸಾರ್ಥಕತೆಯನ್ನು ಗುರುತಿಸಲಾಗದ ಮುಗ್ಧ ಜನರು ಕಣ್ಣೀರಿಡುತ್ತಾರೆ. ಅವರಿಗೆ ಭೋಗ ಜೀವನದ ಸಂತೃಪ್ತಿಯೇ ಸಾಧನೆಯಾಗಿರುತ್ತದೆ. ಹಾಗಾಗಿ ಬೆಳ್ಗೊಡೆಯ ನೆರಳಲ್ಲಿ ಸಾಗುತ್ತಿದ್ದ ಬುದ್ಧ ಕಾಷಾಯ ವಸ್ತ್ರ ಧರಿಸಿ ಭಿಕ್ಷಾಪಾತ್ರೆ ಹಿಡಿದಿರುವುದು ಅನುಕಂಪ ಹಾಗೂ ಕನಿಕರಕ್ಕೆ ಕಾರಣವಾಗುತ್ತದೆ. ಜನರ ಈ ಪ್ರತಿಕ್ರಿಯೆಯಿಂದ ಅವರಿಗೆ ಬುದ್ಧನು ಸಾಧನೆಗೈದು ಸಿದ್ಧಿಸಿಕೊಂಡಿರುವ ಜ್ಞಾನಕ್ಕಿಂತ ರಾಜವೈಭೋಗದ ಐಹಿಕ ಸುಖವೇ ಹಿರಿದು ಎಂಬ ಧೋರಣೆ ಗೋಚರವಾಗುತ್ತದೆ. ಅದೇ ಅವರ ದುಃಖಕ್ಕೂ ಕಾರಣವಾಗುತ್ತದೆ. ಹಾಗಾಗಿ ಅವರು,

**"...................... ಪತ್ನಿ ಪುತ್ರರ ಸಖ್ಯ**
**ದಲ್ಲಿ ಕಾಣದ ಯಾವ ಆನಂದ ಕಂಡನೋ**
**ಇಂಥ ನಿಷ್ಠುರ ವ್ರತಕೆ ಮನ ಮಾಡಿದನೋ ನೋಡಿ !"**

ಎಂದು ತಮ್ಮತಮ್ಮ ಜೀವನಾನುಭವದ ಅರಿವಿನ ಅನುಸಾರವಾಗಿ ಆತನ ಸ್ಥಿತಿಯನ್ನು ವಿಮರ್ಶಿಸುತ್ತಾರೆ. ಸುಖವನ್ನು ಧಿಕ್ಕರಿಸಿ ಹೋಗಿ ದುಃಖದ ಮಡುವಿನಲ್ಲಿ ನಿಂತಿರುವನೆಂಬ ಕರುಣೆಯಿಂದ ಮಾತನಾಡುತ್ತಾರೆ. ಬುದ್ಧನ ಉಪದೇಶ ಕೇಳುವವರೆಗೆ ಸಂಸಾರವೆಂಬ ಬಂಧನದಲ್ಲಿ ತೊಳಲುತ್ತಿರುವವರು ತಾವು ಎಂಬ ಅರಿವಿಲ್ಲದೆ ಆತನೇ ವಿನಾಕಾರಣ ತೊಂದರೆಗೀಡಾಗಿದ್ದಾನೆ ಎಂದು ಮರುಕಪಡುವಲ್ಲಿ ಅವರಲ್ಲಿರುವ ಐಹಿಕಸುಖ ಪ್ರಧಾನ ಮನಸ್ಥಿತಿ ಗೋಚರವಾಗುತ್ತದೆ.

**ನಿಜ ತಪಸ್ವಿನಿ ಯಶೋಧರೆ**

ಬುದ್ಧ ಕಪಿಲವಸ್ತುವಿನ ಅರಮನೆಗೆ ಬಂದ ನಂತರ ಎಲ್ಲರೂ ಆತನಿಗೆ ವಂದಿಸುತ್ತಾರೆ. ಶುದ್ಧೋದನನು ತನ್ನ ಮಗನನ್ನು ಕಂಡು ಸಂತೋಷಿಸುತ್ತಾನೆ. 'ಸಿದ್ಧಾರ್ಥ'ನು ಅರಮನೆಯನ್ನು ಬಿಟ್ಟು

ಹೋದ ನಂತರ ಆತನ ಬಂಧು ಬಾಂಧವರು ಅನುಭವಿಸಿದ ಅಗಲಿಕೆಯ ನೋವಿನ ಚಿತ್ರಣವನ್ನು ಅಲ್ಲಿ ತೆರೆದಿಡುತ್ತಾನೆ. ಸಿದ್ಧಾರ್ಥನ ಮಡದಿ ಯಶೋಧರೆಯ ಸ್ಥಿತಿ ತುಂಬಾ ದಾರುಣವಾಗಿರುತ್ತದೆ. ಆಕೆ ತನ್ನನ್ನು ಬಿಟ್ಟುಹೋದ ಪತಿಯನ್ನು ನೆನೆದು,

**"ನನ್ನಿಂದ ಏನು ಅಪರಾಧವಾಯಿತೊ ತಿಳಿಯೆ,**
**ಏಕೆ ನೊಂದನೋ! ಏಕೆ ತೊರೆಯಬೇಕೆನ್ನಿಸಿತೊ?"**

ಎಂದು ಮಮ್ಮಲ ಮರುಗುತ್ತಾಳೆ. ಹರೆಯದಲ್ಲಿಯೇ ಏಕಾಂಗಿಯಾದ ಯಶೋಧರೆಯ ಸ್ಥಿತಿ ಮರದ ಆಸರೆಯನ್ನು ಕಳೆದುಕೊಂಡ ಬಳ್ಳಿಯಂತಾಗಿರುತ್ತದೆ. ತನ್ನ ಸಕಲಕ್ಕೂ ಆತನನ್ನೇ ಅವಲಂಬಿಸಿದ್ದ ಈಕೆ ಕಾರಣ ತಿಳಿಸದೇ ತನ್ನಿಂದ ದೂರಾದ ಸಿದ್ಧಾರ್ಥನನ್ನು ದೂರದೆ ಆತನ ಈ ನಡೆಗೆ ತನ್ನಿಂದೇನಾದರೂ ಅಪರಾಧವಾಗಿರಬಹುದೇ ಎಂದು ಮರುಗುತ್ತಾಳೆ. ಇದು ಒಂದು ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣು ತಾನು ನಿರಪರಾಧಿಯಾಗಿದ್ದರೂ ಸಹ ಎದುರಾದ ಸಮಸ್ಯೆಗಳ ಕಾರಣವನ್ನು ತಾನೇ ಹೊತ್ತುಕೊಳ್ಳಬೇಕಾದ ಸ್ಥಿತಿಯನ್ನು ಕಟ್ಟಿಕೊಡುತ್ತದೆ. ಹಾಗಾಗಿ ಸಿದ್ಧಾರ್ಥನ ಕುರಿತಾಗಿ ಎಂದೂ ಆಕ್ಷೇಪವನ್ನು ಮಾಡಲಾರೆ ಎಂಬ ಯಶೋಧರೆಯ ಮಾತುಗಳಲ್ಲಿ ಪತಿಭಕ್ತಿಯ ಜೊತೆಗೆ ಪ್ರತಿರೋಧಕ್ಕಿರುವ ಪ್ರತಿಕೂಲ ವ್ಯವಸ್ಥೆಯೂ ಗೋಚರವಾಗುತ್ತದೆ. ಜೊತೆಗಿದ್ದ ಪ್ರತಿಕ್ಷಣವೂ ಆಕೆಯ ಕಣ್ಣಿನಿಂದ ನೀರು ಬರಬಾರದೆಂದು ಸಿದ್ಧಾರ್ಥ ಎಷ್ಟು ಕಾಳಜಿವಹಿಸುತ್ತಿದ್ದನೋ ಅಷ್ಟೇ ಕಾಳಜಿ ಶುದ್ಧೋದನನಿಗೆ ತನ್ನ ಸೊಸೆಯ ಮೇಲೆ ಇತ್ತು. ಹಾಗಾಗಿ ಆತ ಆಕೆ ಅನುಭವಿಸಿರುವ ಮೂಕವೇದನೆಯನ್ನು ಬುದ್ಧನಿಗೆ ತಿಳಿಸುವ ಪ್ರಯತ್ನ ಮಾಡುತ್ತಾನೆ. 'ಸಂಸಾರ ಬಂಧನದಲ್ಲಿ ಒದ್ದಾಡುವ ಈ ಲೋಕದ ಉದ್ಧಾರಕ್ಕಾಗಿ ನೀನೇನೋ ರಾಜವೈಭೋಗ ತೊರೆದು, ಅನ್ನಾಹಾರ ತ್ಯಜಿಸಿ, ತಪಸ್ಸು ಕೈಗೊಂಡು ದೂರನಿಂತೆ. ಆದರೆ, ನಿನ್ನಂತೆ ಹೊರ ಹೋಗಲಾರದೆ, ಅರಮನೆಯ ಸುಖಭೋಗಗಳನ್ನು ಅನುಭವಿಸಲಾಗದೆ, ತನ್ನ ಕರ್ತವ್ಯವನ್ನು ನಿಭಾಯಿಸಲೋಸುಗ ತಪಸ್ವಿನಿಯಂತೆ ಜೀವನ ಸಾಗಿಸುತ್ತಿದ್ದಾಳೆ' ಎಂದು ಆಕೆಯ ಕರುಣ–ಕಠೋರ ಸ್ಥಿತಿಯನ್ನು ಶುದ್ಧೋದನ ಬುದ್ಧನಿಗೆ ತಿಳಿಸುತ್ತಾನೆ.

ಲೋಕದ ದುಃಖನಿವಾರಣೆಗಾಗಿ ಸಿದ್ಧಾರ್ಥ ತನ್ನವರನ್ನು ತ್ಯಜಿಸಿದುದು ಲೋಕ ಮೆಚ್ಚುವ ಕಾರ್ಯವಾಯಿತು. ಅದೇ ಕಾರ್ಯವನ್ನು ಒಬ್ಬ ಹೆಣ್ಣು ಮಾಡಿದ್ದಾದರೆ ಅದು ಲೋಕನಿಂದೆಗೆ ಗುರಿಯಾಗುತ್ತಿತ್ತು. 'ಕುಟುಂಬವನ್ನು ಕಾಪಾಡದವಳು ಲೋಕದ ಚಿಂತೆಯನ್ನು ಹೇಗೆ ದೂರ ಮಾಡುವಳು?' ಎಂಬ ಟೀಕೆಗೆ ಗುರಿಯಾಗುವ ಸಂಭವವಿತ್ತು. ಹಾಗಾಗಿ ಇಂತಹ ಲೋಕರೂಢಿಯಲ್ಲಿದ್ದ ಕಟ್ಟುಪಾಡುಗಳನ್ನು ಮೀರಿ ಸ್ವತಂತ್ರಜೀವನ ನಡೆಸುವುದು ಸ್ತ್ರೀಯರಿಗೆ ಗಗನಕುಸುಮವೇ ಆಗಿರುತ್ತದೆ. ಪ್ರಾಯಃ ಈ ಕಾರಣಗಳಿಂದ ಯಶೋಧರೆಯ ಸಾಧನೆಗೆ ಅರಮನೆಯೇ ಕೇಂದ್ರವಾಯಿತು.

ಎಚ್.ಎಸ್. ವೆಂಕಟೇಶಮೂರ್ತಿ ಅವರ ಬುದ್ಧಚರಣದ ಯಶೋಧರೆ ತನ್ನ ಪತಿಯಂತೆ ತಾನು ಎಲ್ಲವನ್ನು ತೊರೆದು ಸಾಧನೆಗೈದವಳಲ್ಲ. ಪದ್ಮಪತ್ರದ ಜಲಬಿಂದುವಿನಂತೆ ಇದ್ದೂ ಇಲ್ಲದಂತೆ, ಅಂತರಂಗದ ದೃಢತೆಯ ಮೂಲಕ ಸಾಧನೆ ಮಾಡಿದವಳು. ಆಕೆಯ ವ್ಯಕ್ತಿತ್ವದ ಹಿರಿಮೆ ಈ ಕಾವ್ಯದಲ್ಲಿ ಹೀಗೆ ಅಭಿವ್ಯಕ್ತಗೊಂಡಿದೆ.

**"ಇಲ್ಲಿ ಈಕೆಯು ನಿನ್ನ ಹಾಗೆಯೇ ತಪಿಸಿದಳು.**
**ನಾರು ಬಟ್ಟೆಯನುಟ್ಟು ಮೆತ್ತೆಯಲಿ ಮಲಗದೆ**
............................................
**ತಿನ್ನುಣ್ಣೋ ಹರೆಯದಲಿ ಈ ಸಾಧ್ವಿ**
**ತುತ್ತಾದ ಹಾಗೆ ಮುಪ್ಪಿಗೆ ತನ್ನ ಹರೆಯದಲಿ;"**

ಎಂಬ ಸಾಲುಗಳು ಅರಮನೆಯಲ್ಲಿದ್ದೂ ಆಕೆ ಜೀವಿಸಿದ ತಪಸ್ವಿನಿ ಜೀವನದ ಸಂಕೇತವಾಗಿವೆ. ಆಕೆಯ ಮನೋಭಿಲಾಷೆ ಒಂದೇ ಆಗಿತ್ತು. ಅದು 'ಸಿದ್ಧಾರ್ಥ ಏತಕ್ಕಾಗಿ ತನ್ನನ್ನು, ತನ್ನ ಮಗುವನ್ನು, ರಾಜ್ಯ ವೈಭೋಗವನ್ನು ತೊರೆದು ಹೋದನೋ, ಅದರ ಫಲ ಆದಷ್ಟು ಬೇಗ ಸಿಗಲಿ' ಎಂಬುದಾಗಿತ್ತು. ಇಲ್ಲಿ ಯಶೋಧರೆ ತಾನು ಪತಿಯ ವಿಯೋಗವನ್ನು ಅನುಭವಿಸುತ್ತಿದ್ದರೂ ಪತಿಗೆ ಯಶಸ್ಸು ಸಿಗಲಿ ಎಂದು ಹಾರೈಸುತ್ತಿರುವುದಲ್ಲದೆ ತಾನೂ ಅದೇ ಮಾದರಿಯ ಜೀವನವನ್ನು ಸಾಧಿಸಲು ನಿರ್ಧರಿಸಿರುವುದು ತಿಳಿಯುತ್ತದೆ. ಹಾಗಾಗಿ ಜಗತ್ತಿಗೆ ಬೆಳಕಾದ ಬುದ್ಧನ ಯಶಸ್ಸಿನ ಫಲ, ಯಶೋಧರೆಯ ಪ್ರಾರ್ಥನೆಯ ಫಲವೂ ಆಗಿತ್ತು. ಬುದ್ಧನು ಅರಮನೆಗೆ ಬಂದ ಸಂದರ್ಭದಲ್ಲಿ ಆತನನ್ನು ಸಂದರ್ಶಿಸಬೇಕೆಂದು ಕರೆಬಂದಾಗ "ನಿಜವಾಗಿ ನಾನೇನಾದರೂ ಅವರ ಗೌರವವನ್ನು ಸಂಪಾದಿಸಿಕೊಂಡಿರುವೆನಾದರೆ, ಆ ಸಿದ್ಧಾರ್ಥನೇ ನನ್ನ ಬಳಿ ಬರುವನು ಮತ್ತು ನನ್ನನ್ನು ಕಾಣುವನೂ ಸಹ"[2] ಎನ್ನುವ ಯಶೋಧರೆಯ ಧೋರಣೆ ಅವಳ ಸ್ವಾಭಿಮಾನದ ಪ್ರತೀಕವಾಗಿದೆ. ಅವಳ ಈ ನಿರೀಕ್ಷೆಯನ್ನು ಅರಿತ ಬುದ್ಧ ಅದನ್ನು ನೆರವೇರಿಸುವ ಸಲುವಾಗಿ ಅವಳೆಡೆಗೆ ಬರುತ್ತಾನೆ.

**"ಒಳಗೊಳ್ಳುವುದು ನೂರು ನದಿಯಳಲ ಹೆಗ್ಗಡಲು**
**ನಾನು ನನಗಾಗಿ ಅಳುವುದು ಸಹಜ. ಲೋಕಕ್ಕೆ**
**ಅಳಬೇಕು ನೊಂದವರು......... "**

ಎಂಬ ಭಾವನೆಯೇ ಮೂರ್ತಿವೆತ್ತಂತಿದ್ದ ಬುದ್ಧ ತನ್ನ ಪೂರ್ವಾಶ್ರಮದ ಪತ್ನಿಯನ್ನು ತಾನೇ ಭೇಟಿಯಾಗಲು ಬರುತ್ತಾನೆ. ಆತನ ಪ್ರಕಾರ ಸನ್ಯಾಸವೆಂದರೆ ಆತ್ಮಕೇಂದ್ರಿತ ಬದುಕನ್ನು ತ್ಯಜಿಸುವುದು. ಈ ಕಾರಣದಿಂದ ತನ್ನನ್ನಷ್ಟೇ ಅಲ್ಲದೆ ತನ್ನ ಸುತ್ತಲಿನವರನ್ನು ಸಂತೈಸಲು ಬುದ್ಧ ಮುಂದಾಗುತ್ತಾನೆ. ಕೇವಲ ಮಾತಿನ ಮೂಲಕ ತನ್ನ ಸಾಧನೆಯ ಆಳವನ್ನು ಬುದ್ಧ ಯಶೋಧರೆಗೆ ಅರ್ಥೈಸುವ ಅಗತ್ಯವಿರಲಿಲ್ಲ. ಆಕೆ ಆತನ ನಾಡಿಮಿಡಿತವನ್ನು ಅರಿತಿದ್ದವಳು. ಅವನ ಬಯಕೆ ಕೈಗೂಡಲಿ ಎಂದೇ ಬಯಸಿದವಳು. ಹಾಗಾಗಿ

ತನ್ನ ಮನದ ಏರಿಳಿತವನ್ನು ಸಂತೈಸಿಕೊಳ್ಳುವಷ್ಟು ಪ್ರಬುದ್ಧ ಚೇತನ ಯಶೋಧರೆ. ಸಂಯಮ ಮೀರಿ ವರ್ತಿಸದ ಆಕೆಯ ನಡೆ ಪರಿಪೂರ್ಣ ಅರಿವನ್ನು ಸಂಪಾದಿಸಿದ ಚೇತನದಂತೆಯೇ ಇದೆ. ಅರಮನೆಯಲ್ಲಿ ಪ್ರತಿನಿತ್ಯ ಬುದ್ಧನ ಉಪದೇಶ ಕೇಳುತ್ತಾ ತನ್ನ ಅರಿವನ್ನು ವಿಸ್ತರಿಸಿಕೊಳ್ಳುತ್ತಿರುತ್ತಾಳೆ. ತನ್ನ ಅನುಮಾನಗಳನ್ನು ಬುದ್ಧನೊಂದಿಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳುತ್ತಿರುತ್ತಾಳೆ. "ಆಕೆಯ ದುಃಖವು ಅವರ್ಣನೀಯ ಮತ್ತು ವರ್ಣಿಸಲಾಗದ್ದು, ಆಕೆಯನ್ನಾವರಿಸಿರುವ ಆಧ್ಯಾತ್ಮಿಕ ಪರಂಪರೆಯ ಕೀರ್ತಿಯು ಆಕೆಯ ಜೀವನದ ಕಾಲದಲ್ಲಿ ತಳೆದ ಪರಮೋನ್ನತ ಸನ್ನಡತೆಗಳನ್ನು ವೃದ್ಧಿಸಿವೆ ಮತ್ತು ಆ ಮೂಲಕ ಆಕೆಯನ್ನು ಒಬ್ಬ ಅದ್ವಿತೀಯ ಸಾಧ್ವೀಮಣಿಯನ್ನಾಗಿಸಿವೆ."[೩] ಎಂಬ ಮಾತಿಗೆ ತಕ್ಕಂತೆ ಯಶೋಧರೆಯ ವ್ಯಕ್ತಿತ್ವ ರೂಪುಗೊಂಡಿರುತ್ತದೆ.

**ಬಿಕ್ಕು, ಬಿಕ್ಕುಣಿ ಮತ್ತು ಸಂಘ**

ಬುದ್ಧನ ಸಂಘದಲ್ಲಿ ಯಾರಲ್ಲೂ ಮೇಲು–ಕೀಳು, ಭೇದ–ಭಾವ ಎಣಿಸದೆ ಎಲ್ಲರನ್ನೂ ಸಮಾನವಾಗಿ ಕಾಣಲಾಗುತ್ತದೆ. "ಸರ್ವಸಮಾನತೆ! ಏಣಿಯಿರದ ಸಮಪಾತಳಿ" ಎಂಬ ಮಾತೇ ಬುದ್ಧನ ಸಮತಾದೃಷ್ಟಿಕೋನದ ದ್ಯೋತಕವಾಗಿದೆ. ಇಬ್ಬನಿಯ ಮುತ್ತು ಪ್ರತಿಯೊಂದು ಹುಲ್ಲಿನ ಹೆಡೆಗೂ ಕಿರೀಟವಾಗುವಂತೆ ಬುದ್ಧನ ಕಾರುಣ್ಯದೃಷ್ಟಿ ಎಲ್ಲಾ ನೊಂದ ಜೀವಗಳೆದೆಗೆ ಸಮವಾಗಿ ಪಸರಿಸುತ್ತಿತ್ತು. ಬುದ್ಧನ ಸಮತೆಗೆ ಮನಸೋತು ಸ್ತ್ರೀ–ಪುರುಷರೆನ್ನದೆ ಎಲ್ಲರೂ ಆತನ ಅನುಯಾಯಿಗಳಾಗಲು ಇಚ್ಛಿಸುತ್ತಿದ್ದರು. ಆದರೆ ಸ್ತ್ರೀಯರಿಗೆ ಬಿಕ್ಕುಣಿಯರಾಗುವ ಅವಕಾಶವಿರಲಿಲ್ಲ. ಈ ಹಿನ್ನೆಲೆಯಲ್ಲಿ ಬುದ್ಧನ ತಾಯಿ ಗೌತಮಿಯು ಸ್ತ್ರೀಯರ ಪರವಾಗಿ ಧ್ವನಿ ಎತ್ತುತ್ತಾಳೆ. ಇಲ್ಲಿ ಯಶೋಧರೆಗಿಂತಲೂ ಗೌತಮಿಗೆ ಸ್ತ್ರೀ–ಅಸ್ಮಿತೆಯ ಬಗ್ಗೆ ಅಭಿಮಾನ ವ್ಯಕ್ತವಾಗಿರುವುದನ್ನು ಗಮನಿಸಬಹುದು.

**"ಭಿಕ್ಕುಗಳ ಸಂಘವಷ್ಟೇ ಸಾಕೆ ಭಗವಂತ?**
**ಬೇಡವೇ ಭಿಕ್ಕುಣಿಯ ಸಂಘ?"**

ಎಂಬ ಅವಳ ಮಾತುಗಳಲ್ಲಿ ಸ್ತ್ರೀ–ಪುರುಷರಿಬ್ಬರನ್ನೂ ಸೇರಿಸಿದರಷ್ಟೇ ಸಮಾಜ ಪರಿಪೂರ್ಣವಾಗುವುದು ಎಂಬ ನಿಲುವು ಗೋಚರವಾಗುತ್ತದೆ. ಇವರಿಬ್ಬರಲ್ಲಿ ಒಬ್ಬರನ್ನು ಹೊರತುಪಡಿಸಿದರೂ ಅದು ಅರ್ಧಧರ್ಮ, ಅರ್ಧಯುಗವಾದಂತಾಗುತ್ತದೆ ಎಂಬ ಧೋರಣೆಯೂ ಆಕೆಯ ಧ್ವನಿಯಲ್ಲಿ ಕಾಣುತ್ತದೆ. (ಇದಕ್ಕೆ ಪೂರಕವೆಂಬಂತೆ ಮಾಸ್ತಿಯವರ "ಯಶೋಧರಾ" ನಾಟಕದಲ್ಲಿ ಯಶೋಧರೆಯು ಈ ಸಂಬಂಧ ದನಿಯೆತ್ತುವುದನ್ನು ಕಾಣಬಹುದಾಗಿದೆ.) ಬುದ್ಧಚರಣದಲ್ಲಿ ಯಶೋಧರೆಯ ಪರವಾಗಿ ಎನ್ನುವಂತೆ ಗೌತಮಿಯು

"ಪುರುಷನುದ್ಧಾರವಷ್ಟೇ ಸಾಕೆ ಧರ್ಮಕ್ಕೆ?
ಅಸದಳವೇ ಸ್ತ್ರೀಯರಿಗೆ ವ್ರತನಿಷ್ಠೆ?...."

ಎಂದು ಪ್ರಶ್ನಿಸಿ ಸ್ತ್ರೀಯರೂ ಸಹ ವ್ರತನಿಷ್ಠರಾಗಿರಲು ಅರ್ಹರು. ಅವರೂ ಸಹ ಸನ್ಯಾಸಧರ್ಮವನ್ನು ಉತ್ತಮವಾಗಿ ಪಾಲಿಸಲು ಸಮರ್ಥರಾಗಿದ್ದಾರೆ ಎಂದು ತನ್ನ ನಿರ್ಧಾರವನ್ನು ತಿಳಿಸುತ್ತಾಳೆ. ಬುದ್ಧನು ಆನಂದನೊಡನೆ ಹೇಳಿದ "ಪ್ರಿಯ ಆನಂದ ಕಾಲಕೂಡುವವರೆಗೆ ಕಾಯೋಣ" ಎನ್ನುವ ಉತ್ತರ ಅವರ ತಾಳ್ಮೆಯನ್ನು ಪರೀಕ್ಷಿಸಲೋಸುಗವೇ ಹೇಳಿದಂತಿದೆ. ಅಲ್ಲದೆ ಬೋಧಿಯನ್ನು ಪಡೆದ ಬುದ್ಧನಲ್ಲೂ ಸಹ ಮಹಿಳೆಯರಿಗೆ ಒಮ್ಮೆಲೇ ಬದಲಾವಣೆಯನ್ನು ಅನುಭವಿಸುವ ಅವಕಾಶವನ್ನು ಕಲ್ಪಿಸಲು ಮನಸಾಗಲಿಲ್ಲವೋ ಎನಿಸುತ್ತದೆ. ಆದರೆ ಬುದ್ಧನ ಈ ನಿಲುವನ್ನು ಒಪ್ಪಿಕೊಳ್ಳಲಾಗದ ಅಲ್ಲಿನ ಸ್ತ್ರೀ ಸಮೂಹ ತಮಗೂ ಸಹ ಪುರುಷರಂತೆ ಸಂಘದಲ್ಲಿ ಅವಕಾಶ ನೀಡಬೇಕೆಂದು ಒತ್ತಾಯಿಸುತ್ತಾರೆ. ಈ ಒತ್ತಡಕ್ಕೆ ಮಣಿದ ಬುದ್ಧ ಸ್ತ್ರೀಯರಿಗೂ ಸಂಘದಲ್ಲಿ ಅವಕಾಶ ಕಲ್ಪಿಸುತ್ತಾನೆ. ಈ ಸಂಗತಿಯು "......................ಸ್ವಾಭಿಮಾನಿಯಾದ ಹೆಣ್ಣೊಬ್ಬಳು ತನ್ನ ಘನತೆ, ಗೌರವದ ಬಗ್ಗೆ ಜಾಗೃತಳಾಗಿ ತನ್ನ ಸುತ್ತಣ ಪರಿಸರದಿಂದಲೂ ಅಂತಹದೇ ಪ್ರತಿಕ್ರಿಯೆಯನ್ನು ಬಯಸುವಂತಹದಾಗಿದೆ. ಪ್ರಜ್ಞಾವಂತ ಪುರುಷರು ಸ್ತ್ರೀಯರಿಗೆ ತಕ್ಕ ಘನತೆ ಗೌರವಗಳಿಂದ ಅವರನ್ನು ಕಾಣುವುದು ಸ್ತ್ರೀವಾದವಾಗಿದೆ"[೪] ಎಂಬ ಆಧುನಿಕ ಸ್ತ್ರೀವಾದಿಗಳ ಧೋರಣೆಗೆ ಪ್ರೇರಣೆ ನೀಡಿದಂತಿದೆ.

ಯಶೋಧರೆಯ ಇಚ್ಛೆಯಂತೆ ರಾಹುಲನಿಗೆ ದೀಕ್ಷೆ ನೀಡುತ್ತಾನೆ ಬುದ್ಧ. ಅದನ್ನು ಅರಿತ ಶುದ್ಧೋದನ ಈಗಾಗಲೇ ಮಗನೂ ಸನ್ಯಾಸಿಯಾಗಿರುವ ದುಃಖದಲ್ಲಿ ಇದ್ದವನಾದ್ದರಿಂದ ಬುದ್ಧನ ಬಳಿಗೆ ಬಂದು ಬೇಡಿಕೆಯೊಂದನ್ನು ಇಡುತ್ತಾನೆ.

"ತಂದೆಯೊಪ್ಪಿಗೆ ಇರದೆ ಮುಂದೆ ನೀನೆಂದಿಗೂ ಭಿಕ್ಕು ದೀಕ್ಷೆಯ
ನೀಡಬೇಡ ಭಗವಂತನೇ ಮಕ್ಕಳಿಗೆ!"

ಎಂದು ಕೇಳುತ್ತಾನೆ. ವೃದ್ಧ ದೊರೆಯ ಮಾತಿಗೆ, ಆತನ ದುಃಖಕ್ಕೆ ಕರಗಿದ ಕಾರುಣ್ಯಮೂರ್ತಿ ತನ್ನ ಸಂಘದಲ್ಲಿ ಯಾವ ಮಕ್ಕಳಿಗೆ ದೀಕ್ಷೆ ನೀಡಬೇಕೆಂದರೂ ಹಿರಿಯರ ಅನುಮತಿ ಅಗತ್ಯ ಎಂದು ಕಡ್ಡಾಯ ನಿಯಮವನ್ನು ಮಾಡುತ್ತಾನೆ. ಯಾವುದೇ ಭೇದಭಾವವಿಲ್ಲದೆ ಎಲ್ಲರನ್ನೂ ಸಮಾನವಾಗಿ ನೋಡುವ ದೃಷ್ಟಿಕೋನ ಇದೆ ಎಂಬುದನ್ನು ನಾವು ಗಮನಿಸಿದಾಗ್ಯೂ ಸ್ತ್ರೀಯರೂ ಸಹ ಬಿಕ್ಕುಣಿಯ ಸಂಘ ನಿರ್ಮಿಸಲು ಅವಕಾಶವಿಲ್ಲದಿರುವುದು ಸಂಕುಚಿತದಿಂದ ಕೂಡಿದ ದೃಷ್ಟಿಕೋನವೆಂದೇ ಭಾವಿಸಬೇಕಾಗುತ್ತದೆ. ನಂತರದಲ್ಲಿ ಬುದ್ಧ ಬಿಕ್ಕುಣಿಯರ ಸಂಘ ನಿರ್ಮಿಸಲು ಅವಕಾಶ ನೀಡುವ ಮೂಲಕ ಸಮಾನತೆಗೆ ಅವಕಾಶವೀಯುತ್ತಾನೆ.

International Journal of Academic Research
ISSN: 2348-7666; Vol.9, Issue-2(1), February, 2022
Impact Factor: 6.023; Email: drtvramana@yahoo.co.in

ಬುದ್ಧನು ಕಪಿಲವಸ್ತುವಿಗೆ ಆಗಮಿಸಿದ ತರುವಾಯ ತನ್ನ ಮನೆಯ ಜನರ ದುಃಖವನ್ನು ನೀಗಿಸಿ ಅವರಿಗೆ ಮನಃಶಾಂತಿಯನ್ನು ತಂದುಕೊಡಬೇಕೆಂಬ ಆತನ ಇಚ್ಛೆ ಸಫಲವಾಗುತ್ತದೆ. ಅವರಿಗೂ ದೀಕ್ಷೆ ನೀಡುವ ಮೂಲಕ ಅವರು ಪರೋಕ್ಷವಾಗಿ ಆಚರಿಸುತ್ತಿದ್ದ ತಪಸ್ಸಿನ ಬದುಕಿಗೆ ಒಂದು ನಿರ್ದಿಷ್ಟ ಸ್ವರೂಪ ಒದಗಿಸಿಕೊಡುತ್ತಾನೆ.

**ಅಂಗುಲೀಮಾಲನ ಪ್ರಸಂಗ**

ಬುದ್ಧನ ಪ್ರಭಾವಕ್ಕೆ ಮನಸೋತು ಶರಣಾಗಿ ದೀಕ್ಷೆ ಕೈಗೊಂಡು ಬದುಕನ್ನು ಹಸನಾಗಿಸಿಕೊಂಡವರು ಹಲವರು. ಇವರೆಲ್ಲರು ತಮ್ಮ ವ್ಯಾಮೋಹವನ್ನು ಕಳಚಿಕೊಂಡು, ಸರಳ ಬದುಕನ್ನು ರೂಢಿಸಿಕೊಂಡು, ಆರ್ಯ ಸತ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸಾರ್ಥಕ ಬದುಕನ್ನು ಸಾಗಿಸಿದವರು. ಆದರೆ ಬುದ್ಧ ತಾನೇ ಹುಡುಕಿಕೊಂಡು ಹೋಗಿ ಆತನ ದುರ್ಮಾರ್ಗವನ್ನು ಬಿಡಿಸಿ, ಮನಸ್ಸನ್ನು ಶಾಂತಿಯ ಕಡೆಗೆ ತಿರುಗಿಸಲು ಯತ್ನಿಸಿದ ವ್ಯಕ್ತಿ ಅಂಗುಲೀಮಾಲ. ಸರಹಪಾದ ಎಂಬ ಸಿದ್ಧ ಹೇಳುವಂತೆ "ಎಲ್ಲರಲ್ಲಿಯೂ ಬುದ್ಧತ್ವವಿದೆ. ಆದರೆ ವಜ್ರ ಕೆಸರಲ್ಲಿ ಹೂತಿದ್ದರೆ ಅದರ ಹೊಳಪು ಮಾಸುತ್ತದೆ".[iii] ಎಂಬ ಮಾತಿಗೆ ಸೂಕ್ತ ನಿದರ್ಶನವೆಂಬಂತೆ ಅಂಗುಲೀಮಾಲನ ವ್ಯಕ್ತಿತ್ವ ಕಂಡುಬರುತ್ತದೆ. ಬುದ್ಧನು ಅವನೊಳಗಿನ ಬುದ್ಧತ್ವವನ್ನು ಜಾಗೃತಗೊಳಿಸಿ ಮನಪರಿವರ್ತಿಸುವ ಪ್ರಸಂಗ ಇಲ್ಲಿದೆ. ಈತನ ಬದುಕು ನೋಡುವವರಿಗಿರಲಿ ಕೇಳುಗರಿಗೂ ಭಯ ಹುಟ್ಟಿಸುವಷ್ಟು ಭೀಕರವಾದುದು. ಜಾಲಿನೀವನದಲ್ಲಿ ವಾಸಿಸುತ್ತಿದ್ದ ಅಂಗುಲೀಮಾಲ; ಮನುಷ್ಯರನ್ನು ಕೊಂದು ತಿಂದು ತೇಗುವ ಪರಮಕ್ರೂರಿಯಾಗಿದ್ದನು. ಆತನು ವಾಸಿಸುತ್ತಿದ್ದ ಕಾಡಿನ ಬಳಿ ತೆರಳಲು ಸಹ ಜನ ಹೆದರುತ್ತಿದ್ದರು. ಅವನ ಬಗ್ಗೆ ತಿಳಿದ ಬುದ್ಧ ಆತನನ್ನು ಸಂಧಿಸಲೇಬೇಕೆಂಬ ದೃಢ ನಿಶ್ಚಯದಿಂದ ಅವನನ್ನು ಅರಸಿ ಹೊರಡುತ್ತಾನೆ.

ನರಹಂತಕನಾಗಿರುವ, ಮನುಷ್ಯರ ಬೆರಳುಗಳನ್ನು ಹಾರವಾಗಿ ಹಾಕಿಕೊಂಡಿರುವ ಅಂಗುಲೀಮಾಲನನ್ನು ಏಕಾಂಗಿಯಾಗಿ ದಟ್ಟವಾದ ಕಾಡಿನಲ್ಲಿ ಕಾಣಲು ಹೊರಟ ಬುದ್ಧನ ಧೈರ್ಯ ನಿಜಕ್ಕೂ ಆಶ್ಚರ್ಯ ಹುಟ್ಟಿಸುವಂಥದ್ದು. ಬುದ್ಧನನ್ನು ಕಂಡಾಗ ಮನುಷ್ಯಪ್ರಾಣಿಯೊಂದು ತನ್ನೆಡೆಗೆ ಬರುವುದನ್ನು ಕಂಡ ಅಂಗುಲೀಮಾಲ ಕತ್ತಿಯನ್ನು ಝುಳಪಿಸುತ್ತಾ ಅವನೆಡೆಗೆ "ನಿಲ್ಲು ನಿಲ್ಲೆಂದು" ಕೂಗುತ್ತಾ ಬರುತ್ತಾನೆ. ಆಗ ಬುದ್ಧನು

**"ನಾನು ನಿಂತಿದ್ದೇನೆ. ನಿಲ್ಲದಿರುವವ ನೀನೇ!**
**ಜೀವ ಹಿಂಸೆಗಳಿಂದ ದೂರ ನಿಂತಿದ್ದೇನೆ.**
**ಭಯದೆದುರು ನಿರ್ಭಯದ ಹಾಗೆ ನಿಂತಿದ್ದೇನೆ**
**ಸಖ್ಯಕಾರುಣ್ಯವಾಧರಿಸಿ ನಿಂತಿದ್ದೇನೆ.**

**ಶಾಂತಿ ಮಾರ್ಗಕೆ ತೋರುಬೆರಳನ್ನು ತೋರುತ್ತ**
**ನಿಂತಿರುವೆ. ತೆಗೆದುಕೋ ನನ್ನ ಈ ಬೆರಳನ್ನು.**
**ದಿಕ್ಸೂಚಿಯಾಗಿ ತೋರಲಿ ಶಾಂತಿಮಾರ್ಗವನು."**

ಎಂದು ಹೇಳುವಲ್ಲಿ ಅಂಗುಲೀಮಾಲನು ನಿಲ್ಲಿಸಬೇಕಾದ ಕೃತ್ಯಗಳನ್ನು ಎಚ್ಚರಿಸುತ್ತಿರುವ ಧ್ವನಿ ಕಾಣಿಸುತ್ತದೆ. ಬುದ್ಧನ ಈ ಮಾತುಗಳನ್ನು ಕೇಳಿದ ಅಂಗುಲೀಮಾಲನಿಗೆ ದಿಗ್ಭ್ರಾಂತಿಯಾಗುತ್ತದೆ. ಏಕೆಂದರೆ ಈವರೆಗೂ ಆತನೊಡನೆ ಈ ರೀತಿಯಾಗಿ ಯಾರೂ ಎದುರು ನಿಂತು ಮಾತನಾಡಿರುವುದಿಲ್ಲ. ಅವನೆದುರು ನಿಂತಿರುವ ಬುದ್ಧನ ಶಾಂತಸ್ವರೂಪ, ಸಮಚಿತ್ತ ಹಾಗೂ ದೃಢತೆಯಿಂದ ಆತನೊಬ್ಬ ವಿಶೇಷ ವ್ಯಕ್ತಿಯೆಂಬುದು ಅಂಗುಲೀಮಾಲನಿಗೆ ತಿಳಿಯುತ್ತದೆ. ಬುದ್ಧನ ಭಯವಿಲ್ಲದ ಸಂಭಾಷಣೆ ಹಾಗೂ ಹಿತವಚನಗಳು ಅಂಗುಲೀಮಾಲನ ಅಂತರಂಗವನ್ನು ಹೊಕ್ಕು ಅವನಲ್ಲಿದ್ದ ಆವರೆಗಿನ ದುಷ್ಟ ಗುಣಗಳನ್ನು ಕಳಚಿ ಸಕಾರಾತ್ಮಕ ಚಿಂತನೆಗಳುಳ್ಳ ಹೊಸ ಜೀವನದತ್ತ ಮುಖಮಾಡುವಂತೆ ಮಾಡುತ್ತವೆ. "ಉತ್ಸಾಹವೇ ಇಲ್ಲದಿರುವಲ್ಲಿ ಯಾರು ಉತ್ಸಾಹ ತೋರುವರೋ, ಯಾರು ತನ್ನ ಹಿಂದಿನದನ್ನು ಉತ್ತಮ ಸದ್ಗುಣಗಳ ನಿಲುವಂಗಿಯಿಂದ ಮುಚ್ಚುವರೋ, ಯಾರು ತಮ್ಮ ಯೌವ್ವನದಲ್ಲಿ ಬುದ್ಧನ ಮೊರೆ ಹೋಗುವರೋ, ಅವನು ಚಂದ್ರನು ಭೂಮಿಯನ್ನು ಬೆಳದಿಂಗಳಿಂದ ಪ್ರಕಾಶಿಸುವಂತೆ ಅವರು ಪ್ರಕಾಶಗೊಳಿಸುವರು".[೬] ಎಂಬ ಮಾತಿನಂತೆ ಅಂಗುಲೀಮಾಲನಲ್ಲಾದ ಬದಲಾವಣೆ ಕೇವಲ ಅವನಲ್ಲಷ್ಟೇ ಅಲ್ಲದೆ ಇಡೀ ಪ್ರಕೃತಿಯಲ್ಲಿಯೇ ಗೋಚರಿಸುತ್ತದೆ.

**"______ಕಾಡಲೊಮ್ಮೆಗೆ ಸಾವಿರಾರು**
**ಕೊರಳರಳುತಿವೆ. ಬಗೆಬಗೆಯ ಚಿಲಿಮಿಲಿಯ**
**ಇನಿದನಿಯ ಹನಿಮಳೆಯು ಶುರುವಾಗುತಿದೆ ಈಗ."**

ಎಂಬ ಸಾಲುಗಳಲ್ಲಿ ಅಂಗುಲೀಮಾಲನ ಹಿಂಸೆಯಿಂದ ದನಿ ಕಳೆದುಕೊಂಡಿದ್ದ ಹಕ್ಕಿಗಳು ಇವನ ಬದಲಾವಣೆಗೆ ಮನಸೋತು ಹಾಡುತ್ತಿವೆ, ಹಲವಾರು ವಿಧದ ಹಕ್ಕಿಪಕ್ಷಿಗಳು ತಮಗೆ ಸ್ವಾತಂತ್ರ್ಯ ಸಿಕ್ಕಂತೆ ಸಂತಸದಿ ಇನಿದಾದ ದನಿಯಿಂದ ಸ್ವರ ಹೊಮ್ಮಿಸಿ ಸಂಭ್ರಮಿಸುತ್ತಿವೆ. ಹಾವು ಪೊರೆಕಳಚುವಂತೆ ಒಮ್ಮೆಲೆ ದುಷ್ಟ ಗುಣಗಳಿಂದ ಮುಕ್ತನಾದ ಅಂಗುಲೀಮಾಲ ತನ್ನ ಗುರುವನ್ನು ಅನುಸರಿಸಿ ಆತನ ಅನುಯಾಯಿಯಾಗಿ ಸೌಮ್ಯವಾಗಿ ಹಿಂಬಾಲಿಸುತ್ತಾನೆ. "ಹೋಲುತ್ತ, ದೀಪವನು ಹಿಂಬಾಲಿಸುವ ನೆರಳ" ಎಂಬಂತೆ ಬಿಟ್ಟೂಬಿಡದೆ ಜೊತೆಗೆ ಸಾಗುವೆನೆಂದು ಅವನನ್ನೇ ಹಿಂಬಾಲಿಸಿ ತೆರಳುತ್ತಾನೆ. ಹೊಸ ಮನುಷ್ಯನಾಗಿ ಬದಲಾಗುತ್ತಾನೆ. ಈವರೆಗೂ ಕೊಲೆಪಾತಕಿಯಾಗಿದ್ದ ಅಂಗುಲೀಮಾಲ ಇಂದು ಸನ್ಯಾಸಿಯಾಗಿದ್ದಾನೆ. ನೋಡುಗರು ಈ ಅಚ್ಚರಿಯ ಕಂಡು ನಿಬ್ಬೆರಗಾಗುತ್ತಿದ್ದಾರೆ. ಈ ಪ್ರಸಂಗದಲ್ಲಿ ಅಂಗುಲೀಮಾಲನು ಕ್ರೂರ ಗುಣಗಳುಳ್ಳ ಮನುಷ್ಯರ ಪ್ರತಿನಿಧಿಯಾಗಿ ಹಾಗೂ ಬುದ್ಧನು ಅಂತಹ ಕ್ರೂರತನವನ್ನು ಹೋಗಲಾಡಿಸಿ ಸನ್ಮಾರ್ಗದತ್ತ ಕರೆದೊಯ್ಯಬಲ್ಲ ಚೇತನವಾಗಿ ಕಂಡುಬರುತ್ತಾನೆ.

**ಕಿಸಾಗೌತಮಿಯ ಪ್ರಸಂಗ**

ಬುದ್ಧನ ಬೋಧನೆಗಳು ಎಲ್ಲೆಡೆ ಪ್ರಚುರಗೊಂಡಿರಲು ಆತನ ಅರಿವಿನ ಬೆಳಕನ್ನು ಪಡೆದು ಅನೇಕರು ತಮ್ಮ ವ್ಯಾಮೋಹಗಳಿಂದ ದೂರಾಗುವ ಮೂಲಕ ಜೀವನದಲ್ಲಿ ನೆಮ್ಮದಿ ಕಾಣಲು ಬಯಸುತ್ತಾರೆ. ಹೀಗಿರಲು ತಾಯಿಯೊಬ್ಬಳು ತನ್ನ ಸತ್ತ ಮಗನನ್ನು ಹೊತ್ತುತಂದು ಆತನನ್ನು ಬದುಕಿಸಿಕೊಳ್ಳುವ ಆಸೆಯಿಂದ ಬುದ್ಧನಿಗಾಗಿ ಕಾಯುತ್ತಾ ಕೂರುತ್ತಾಳೆ. ಆಕೆಯ ಅಳು ಬುದ್ಧನನ್ನು ಎಚ್ಚರಿಸಿದಾಗ ಆ ತಾಯಿ ಕಿಸಾಗೌತಮಿಯು ತನ್ನ ಕೂಸನ್ನು ಬದುಕಿಸಬೇಕೆಂದು ದೈನ್ಯವಾಗಿ ಬೇಡಿಕೊಳ್ಳುತ್ತಾಳೆ.

**"...ದಯಮಾಡಿ ಎಚ್ಚರಿಸು!**
**ಮಲಗಿದ್ದ ಕೂಸು ಮೈಮರೆತು ಮಲಗಿರುವುದು!**
**ಪುಣ್ಯಾತ್ಮ ನೀನು ಮುಟ್ಟಿದರೆ ಕಣ್ತೆರೆಯುವುದು."**

ಎಂದು ಮುಗ್ಧತೆಯಿಂದ ಅಂಗಲಾಚುತ್ತಾಳೆ. ಆಕೆಯ ಮನಸ್ಸಿಗೆ ಸಾವು ಎಲ್ಲರಿಗೂ ನಿಶ್ಚಿತವಾದದ್ದು ಎಂಬ ಅಂಶವನ್ನು ಅರ್ಥೈಸಲೋಸುಗ ಬುದ್ಧನು ಹೀಗೆ ನುಡಿಯುತ್ತಾನೆ.

**"ಕೂಸು ತೀರಿದೆ ಮಗಳೇ, ಸಾವೇ ಇಲ್ಲದ ಮನೆಯ**
**ಸಾಸಿವೆಯ ತಂದರೆ, ಕೂಸು ಕಣ್ತೆರೆದೀತು!"**

ಈ ಮಾತು ಕೇಳುತ್ತಿದ್ದಂತೆ ತನ್ನ ಮಗುವಿಗಾಗಿ ತಾನು ಏನು ಮಾಡಬೇಕಾದರೂ ಮಾಡಬಲ್ಲೆನೆಂಬ ಉತ್ಸಾಹದಲ್ಲಿ ಕಿಸಾಗೌತಮಿ ಸಾವಿಲ್ಲದ ಮನೆಯಿಂದ ಸಾಸಿವೆಯನ್ನು ತರಲು ಮುಂದಾಗುತ್ತಾಳೆ. ಸಾಸಿವೆಯನ್ನು ತರಲು ಹೊರಟಾಗ ಆಕೆಯಲ್ಲಿದ್ದ ಉತ್ಸಾಹ ಮರಳಿ ಬರುವಾಗ ಇರಲಿಲ್ಲ. ಏಕೆಂದರೆ ಸಾವೇ ಇಲ್ಲದ ಮನೆ ಆಕೆಗೆ ಸಿಗುವುದಿಲ್ಲ. ಮಗನ ಸಾವನ್ನು ಸಹಿಸಿಕೊಳ್ಳಲು ಆಕೆ ಸಿದ್ಧಳಿರದಿದ್ದರೂ ಪ್ರಕೃತಿ ನಿಯಮವನ್ನು ಬದಲಿಸಲು ಸಾಧ್ಯವಿಲ್ಲ ಎಂಬ ಸತ್ಯವನ್ನು ಅರಿಯುತ್ತಾಳೆ. ಮನೆ-ಮನೆಯನ್ನು ತಿರುಗಿ ಬಂದು, ಸಾಕಾಗಿ, ಸತ್ತ ಕಂದನ ನೆನೆದು ಬುದ್ಧನ ಪಾದಗಳಿಗೆರಗಿ ಗೋಳಿಡುತ್ತಾಳೆ. ಬುದ್ಧಗುರು ಆಕೆಯ ತಲೆಯನ್ನು ನೇವರಿಸಿ

**"ಹುಟ್ಟುಸಾವಿನ ನಿತ್ಯನಾಟಕವ ತೋರುತಿದೆ**
**ಪ್ರಕೃತಿ** . . . . . . . . . . . . . . . . . . .
**ಯಾರಿಗೂ ತಪ್ಪಿಸಲು ಆಗದೀ ಮೃತ್ಯುವನು**
**ಅಪ್ಪಿಕೋ! ಒಪ್ಪಿ ಈ ಬಾಳ ಕ್ಷಣಿಕತೆಯನ್ನು."**

ಎಂದು ಹೇಳುವ ಮೂಲಕ ಅವಳ ಮನಸ್ಸಿಗೆ ಸಾಂತ್ವನವನ್ನು, ಧೈರ್ಯವನ್ನು ತುಂಬುತ್ತಾನೆ. ಈ ಸಾಲುಗಳು ಜೀವನದ ನಶ್ವರತೆಯ ಬಗ್ಗೆ ಅರಿವನ್ನು ಮೂಡಿಸುತ್ತವೆ. ಇಲ್ಲಿ ಕಿಸಾಗೌತಮಿಯು ಪ್ರಕೃತಿ

ಸಹಜ ನಿಯಮವನ್ನು ಅರ್ಥೈಸಿಕೊಂಡು ತನ್ನ ಮಗನ ಮೇಲಿನ ವ್ಯಾಮೋಹವನ್ನು ತ್ಯಜಿಸಿ ವಾಸ್ತವಕ್ಕೆ ಮರಳಿರುವುದನ್ನು ಗಮನಿಸಬಹುದಾಗಿದೆ. ಇದಕ್ಕೆ ಸಮಯೋಚಿತವೆಂಬಂತೆ

**"ಬಾಳು ಬದುಕುವುದಕ್ಕೆ; ಸಾವುಂಟು ಸಾಯಲು.**
**ಹುಟ್ಟು ಸಾವಿವೆ ಬಂದಹಾಗೆ ಬಾ ಎನ್ನಲು."**

ಎಂಬ ಎಚ್ಚೆಸ್ವಿಯವರ ಮಾತು ನಿಜಕ್ಕೂ ಪ್ರತಿಯೊಬ್ಬರ ಬಾಳಿಗೂ ಸಮಾಧಾನದ ಮುನ್ನುಡಿಯಾಗಿದೆ. ಸಾವನ್ನು ಗೆದ್ದು ನಿಲ್ಲಲು ಯಾರಿಂದಲೂ ಸಾಧ್ಯವಿಲ್ಲ, ಹಾಗೆಂದು ಸಾವನ್ನೇ ನಿರೀಕ್ಷಿಸುತ್ತಾ, ಸಾವಿಗೆ ಭಯಪಡುತ್ತಾ ಕೂರುವುದು ಇರುವ ಬದುಕನ್ನು ನಶ್ವರಗೊಳಿಸುವ ಯತ್ನವಾಗುತ್ತದೆ. ಹಾಗಾಗಿ ಸಾವು ಬಂದಾಗ ಸ್ವೀಕರಿಸುವುದು ಪ್ರತಿಯೊಬ್ಬರಿಗೂ ಅನಿವಾರ್ಯವಾಗಿದೆ. ಇರುವಾಗ ಬದುಕನ್ನು ಒಪ್ಪಿ, ಅಪ್ಪಿ ನಡೆಯುವುದು ಪ್ರತಿಯೊಂದು ಜೀವಿಯ ಕರ್ತವ್ಯವೂ ಆಗಿದೆ. ಹುಟ್ಟು–ಸಾವಿನ ವಾಸ್ತವತೆಯನ್ನು ಅರ್ಥೈಸಿಕೊಳ್ಳಲು ಈ ಪ್ರಸಂಗ ಉತ್ತಮ ನಿದರ್ಶನವಾಗಿದೆ.

**ಬುದ್ಧನ ಪ್ರೀತಿಸೇಚನ**

ಬುದ್ಧನ ಕರುಣೆಗೆ ಮನಸೋತು ಶರಣಾಗಿ ಬಿಕ್ಕುಗಳಾದವರು ಹಲವರು. ಅವರಲ್ಲಿ ಬಿಂಬಸಾರನ ಪುತ್ರನೂ ಸಹ ಒಬ್ಬನು. ಈತ ತನ್ನ ಅಲ್ಪಮತಿಯಿಂದ ದೇವದತ್ತನ ಚಾಡಿಮಾತಿಗೆ ಕಿವಿಗೊಟ್ಟು ಬುದ್ಧನನ್ನು ಕೊಲ್ಲುವ ಸಂಚಿಗೆ ಮುಂದಾದವನು. ಬುದ್ಧನ ವಿರುದ್ಧ ಮಾಡಿದ ಸಂಚು ಫಲಕಾರಿಯಾಗದೆ, ಆತನ ಪ್ರಭಾವಳಿಗೆ ಮನಸೋತು ಶರಣಾಗುತ್ತಾನೆ. ಬುದ್ಧನು ಅವನನ್ನು ಮನ್ನಿಸಿ ಆಶೀರ್ವದಿಸುತ್ತಾನೆ.

ಬುದ್ಧನು ವೈಶಾಖ ಪೂರ್ಣಿಮೆಯಂದು ವೇಣುವನದಲ್ಲಿ ಬಿಕ್ಕುಗಳಿಗೆ ಉಪದೇಶ ನೀಡುವ ಸಂದರ್ಭದಲ್ಲಿ ಕ್ಷಣ ಮಾತ್ರದಲ್ಲಿ ಎಲ್ಲಿಂದಲೋ ಒಂದು ಹೆಬ್ಬಂಡೆ ಇವನೆಡೆಗೆ ಉರುಳಿಬರುತ್ತದೆ. ಆ ಬಂಡೆಗೆ ಹೆದರಿದ ಬಿಕ್ಕುಸಮುದಾಯ ಹೌಹಾರಿ ಓಡುತ್ತದೆ. ಬುದ್ಧನು ಕ್ಷಣಮಾತ್ರವೂ ವಿಚಲಿತನಾಗದೆ ಅಲ್ಲಿಯೇ ಸ್ಥಿರವಾಗಿ ನಿಂತು ನೋಡುತ್ತಾನೆ. ನೋಡ–ನೋಡುತ್ತಿದ್ದಂತೆ ಹೆಬ್ಬಂಡೆ ದಾರಿ ಬದಲಿಸಿ ಪಕ್ಕಕ್ಕೆ ಉರುಳಿಹೋಗುತ್ತದೆ. ಆ ಬಂಡೆಯಿಂದ ಸಿಡಿದ ಚೂರೊಂದು ಬುದ್ಧನ ಕಾಲಿಗೆ ತಗುಲಿ ಗಾಯವಾಗುತ್ತದೆ. ಬಂಡೆ ಉರುಳಿ ಬಂದದ್ದರ ಬಗ್ಗೆ ವಿಚಾರಿಸಲಾಗಿ ಯಾರೋ ಮೀಟುಗೋಲಿನಿಂದ ಸಡಿಲಿಸಿ ಬುದ್ಧನ ಹತ್ಯೆಗಾಗಿ ಉರುಳಿಸಿ ಬಿಟ್ಟ ಬಂಡೆ ಎಂಬ ಸತ್ಯ ಅರಿವಾಗುತ್ತದೆ. ಆ ನಂತರ ಬುದ್ಧನಲ್ಲಿಗೆ ಬರುವವರನ್ನು ಪರೀಕ್ಷಿಸಿ ಒಳಬಿಡುವ ಭದ್ರತೆ ಮಾಡಲಾಗುತ್ತದೆ. ಆದರೆ ಇದನ್ನು ಸಹಿಸದ ಬುದ್ಧ

**"ಕೇಡಿನಲಿ ಹುಡುಕುವುದು ಮಾನವ್ಯ ನನ್ನ ಗುರಿ!**
**ಮಾನವರಲರಸುವುದು ಕೇಡ! ಹೇಗಯ್ಯ ಸರಿ?!"**

ಎಂಬ ತನ್ನ ಧೋರಣೆಯನ್ನು ತಿಳಿಸುತ್ತಾನೆ. ಇದರಿಂದ ಬುದ್ಧ ಪ್ರಕೃತಿಯ ಸಕಲ ಚರಾಚರ ವಸ್ತುಗಳನ್ನು ಒಂದೇ ತೆರನಾಗಿ ಕಾಣುತ್ತಿದ್ದನೆಂಬುದು ಗೋಚರವಾಗುತ್ತದೆ.

ಮತ್ತೊಮ್ಮೆ ಬುದ್ಧನು ವೈಶಾಲಿಯಲ್ಲಿ ಇರಬೇಕಾದರೆ ಮಾವಟಿಗನಿಲ್ಲದ ಸಮಯದಲ್ಲಿ ಸರಪಳಿ ಕಳಚಿ, ಮಾದಕ ದ್ರವ್ಯಗಳನ್ನು ಕುಡಿಸಿ ಆನೆಯನ್ನು ಅಟ್ಟಲಾಗಿರುತ್ತದೆ. ಆನೆಯ ಆರ್ಭಟಕ್ಕೆ ಹೆದರಿ ಎಲ್ಲರೂ ದಿಕ್ಕೆಟ್ಟು ಚೆಲ್ಲಾಪಿಲ್ಲಿಯಾಗುತ್ತಾರೆ. ಬುದ್ಧನ ಕೊಲೆಗೆ ಸಂಚನ್ನು ರೂಪಿಸಿ ಪಟ್ಟದ ಆನೆ ನಲಾಗಿರಿಗೆ ಮಾದಕದ್ರವ್ಯ ಕುಡಿಸಿ ಅಟ್ಟಲಾಗಿದೆ ಎಂಬುದು ತಿಳಿಯುತ್ತದೆ. ಅದನ್ನು ಗಮನಿಸಿದ ಬುದ್ಧ; ಧ್ಯಾನ ಮಂದಿರದಿಂದ ಹೊರಬಂದು ಘೀಂಕರಿಸುತ್ತಾ ಬರುತ್ತಿರುವ ಮದಗಜದ ಮುಂದೆ ನಿಂತು ಮಗುವಿಗೆ ಬುದ್ಧಿಮಾತು ಹೇಳುವಂತೆ, "ಮತ್ತೇರಿಸುವ ದ್ರವ್ಯ ಸ್ವೀಕರಿಸಬಾರದು" ಎಂದು ಅದರ ಕೊರಳ ಗಂಟೆಯನ್ನು ಮಿಡಿಯುತ್ತಾ ಪ್ರೀತಿಯಿಂದ ಅದನ್ನು ನೋಡುತ್ತಾನೆ. ಆ ಆನೆಯ ಗಂಟೆಯ ಶಬ್ದ "ಓಂ" ಎಂಬ ನಾದವನ್ನು ಹೊಮ್ಮಿಸಿದಂತೆ ತಾನೂ "ಓಂ" ಎಂದು ಉಚ್ಚರಿಸುತ್ತಾ ಅದರ ಬಾಯಲ್ಲಿ ಬೆಲ್ಲದ ಉಂಡೆಯನ್ನು ಹಾಕುತ್ತಾನೆ. ಮಂತ್ರಿಸಿದ ಬೂದಿ ಎರಚಲು ಮರುಳಾದವರು ವರ್ತಿಸುವಂತೆ, ಅದುವರೆಗೂ ಘೀಂಕರಿಸುತ್ತಾ ನುಗ್ಗುತ್ತಿದ್ದ ಆನೆ ಮೆಲ್ಲಗೆ ಬುದ್ಧನ ಮುಂದೆ ಮಂಡಿಯೂರಿ ಕುಳಿತುಬಿಡುತ್ತದೆ. ಅಂದರೆ ಪ್ರತಿಯೊಂದು ಪ್ರಾಣಿಯೂ ಸಹ ಪ್ರೀತಿಯನ್ನು ಬಯಸುತ್ತದೆ ಹಾಗೂ ಪ್ರೀತಿಯನ್ನು ಅರ್ಥೈಸಿಕೊಳ್ಳುತ್ತದೆ. ಆ ಸೂಕ್ಷ್ಮ ಅರಿತ ಬುದ್ಧ ಪ್ರೀತಿಯ ನೋಟದಿಂದಲೇ ಆನೆಯನ್ನು ಮಣಿಸುವುದನ್ನು ಕಾಣಬಹುದು. "ಹಠಕೆ ಸೋಲುವನಲ್ಲ, ಸೋಲುವನು ಪ್ರೀತಿಗೆ" ಎಂಬಂತೆ ಬುದ್ಧ ಪ್ರತಿ ಚರಾಚರ ವಸ್ತುಗಳನ್ನು ಪ್ರೀತಿಯಿಂದಲೇ ಬದಲಿಸುವ ಮೂಲಕ ಪ್ರೀತಿಯ ಅದ್ಭುತ ಶಕ್ತಿಯ ದ್ಯೋತಕವಾಗಿದ್ದಾನೆ.

**ಆಮ್ರಪಾಲಿಯ ಪ್ರಸಂಗ**

ಬುದ್ಧನ ಕಾರುಣ್ಯ ದೃಷ್ಟಿ ಯಾವುದೇ ಒಂದು ವರ್ಗಕ್ಕೆ ಸೀಮಿತವಾದದ್ದಲ್ಲ. ಎಲ್ಲ ಜನರನ್ನೂ ಸಮಾನವಾಗಿ ನೋಡುವ ಸಮತಾದೃಷ್ಟಿ. ಈ ನೋಟದ ಪ್ರಭಾವಕ್ಕೆ ಒಳಗಾಗಿ ತನ್ನನ್ನು ಪುನೀತಳನ್ನಾಗಿಸಿ ಕೊಂಡ ಮತ್ತೊಂದು ಚೇತನ ಆಮ್ರಪಾಲಿ. ಬುದ್ಧನ ಮಾತಿನ ಬೆಳಕು ಸೂರ್ಯನ ಬೆಳಕಿನಂತೆ ಎಲ್ಲೆಡೆ ಹರಡುವಾಗ ಸೂರ್ಯನ ಕಡೆಗೆ ಮುಖ ಮಾಡುವ ಸೂರ್ಯಕಾಂತಿಯಂತೆ ಆಮ್ರಪಾಲಿಯು ಬುದ್ಧನ ಪ್ರಭಾವಕ್ಕೆ ಒಳಗಾಗುತ್ತಾಳೆ.

ವೈಶಾಲಿಯ ಆಮ್ರವನದಲ್ಲಿ ಬುದ್ಧ ನೆಲೆಸಿರುತ್ತಾನೆ. ಆಮ್ರವನದ ಒಡತಿ ರಾಜನರ್ತಕಿಯಾದ ಆಮ್ರಪಾಲಿ. ವೇಶ್ಯೆಯಾದ ಆಕೆಯನ್ನು ಒಲಿಸಿಕೊಳ್ಳಲು ಅನೇಕರೂ ಪ್ರಯತ್ನಿಸಿದರೂ ಆಮ್ರಪಾಲಿಗೆ ಭೋಗಜೀವನದ ಮೇಲೆ ಆಸಕ್ತಿ ಇರಲಿಲ್ಲ. 'ಒಡಲನ್ನು ಮಾರಿ ಹಣಗಳಿಸುವುದೊಂದೇ ಬದುಕಿನ

ಗುರಿಯೇ?' ಎಂಬ ಪ್ರಶ್ನೆ ಅವಳನ್ನು ಕಾಡುತ್ತಿರುತ್ತದೆ. ಈ ಸಂದರ್ಭದಲ್ಲಿ ಬುದ್ಧನ ಬಗ್ಗೆ ಕೇಳಿ ತಿಳಿದು, ಅವನ ಬಳಿಗೆ ಬಂದು, ಮುಖ ಮರೆಮಾಚಿಕೊಂಡು ಆತನ ಅಮೃತಮಯ ನುಡಿಗಳನ್ನು ಆಲಿಸುತ್ತಿರುತ್ತಾಳೆ. ಅವಳು ಹೀಗೆ ಮುಖ ಮರೆಮಾಚಿಕೊಳ್ಳುವಲ್ಲಿ, ಜನರು ತನ್ನನ್ನು ನೋಡಿ, "ಬೆಲೆವೆಣ್ಣಿಗೇಕೆ ಉಪದೇಶ?" ಎಂದು ಹೀಯಾಳಿಸುವರೆಂಬ ಅಂಜಿಕೆಯೂ ಇದ್ದಂತೆ ತೋರುತ್ತದೆ.

**"ಇರುಳ ಚೆಲುವೆಗೆ ತೆಗೆದ ನೇರ ಬೈತಲೆಯಂತೆ**
**ಬುದ್ಧನುಡಿ ನೆಮ್ಮದಿಯ ಸಂಚಾರ ಮನದೊಳಗೆ."**

ಬುದ್ಧನ ಮಾತುಗಳಿಂದ ಬದುಕಿನ ಬಗ್ಗೆ ಪ್ರೀತಿಯನ್ನು, ಭೋಗ ಜೀವನದ ಬಗ್ಗೆ ವೈರಾಗ್ಯವನ್ನು ಆಮ್ರಪಾಲಿ ಬೆಳೆಸಿಕೊಳ್ಳುತ್ತಾಳೆ. ಬುದ್ಧನನ್ನು ತನ್ನ ಮನೆಗೆ ಭಿಕ್ಷಕ್ಕೆ ಆಹ್ವಾನಿಸುತ್ತಾಳೆ. ಬುದ್ಧನು ಆ ಆತಿಥ್ಯ ಸ್ವೀಕರಿಸುವುದಾಗಿ ಅನುಮತಿ ಕೊಡಲು ಆಕೆಯು ಅತ್ಯಂತ ಆನಂದವನ್ನು ಹೊಂದುತ್ತಾಳೆ. ಆಗ ಅಲ್ಲೇ ಇದ್ದ ಆನಂದನು ತಟ್ಟನೆ "ಆಕೆ ಒಡಲು ಮಾರುವ ಹೆಣ್ಣು" ಎಂದು ಹೇಳುತ್ತಾನೆ. ತಕ್ಷಣ ಬುದ್ಧನು ಸಹಜವಾಗಿ ಎಂಬಂತೆ, "ನನಗವಳು ಹೆಣ್ಣಲ್ಲ, ಒಂದು ದುಃಖಿತ ಜೀವ" ಎಂದು ಹೇಳುವ ಮೂಲಕ ದುಃಖದ ಕೂಪದಲ್ಲಿ ಬಿದ್ದಿರುವವರೇ ತನಗೆ ಹೆಚ್ಚು ಪ್ರಿಯರಾಗುತ್ತಾರೆ ಎಂಬುದನ್ನು ಸ್ಪಷ್ಟಪಡಿಸುತ್ತಾನೆ.

ಅದೇ ಸಂದರ್ಭದಲ್ಲಿ ಲಿಚ್ಛವಿಯ ದೊರೆ ಬುದ್ಧನನ್ನು ಭಿಕ್ಷೆಗೆ ಆಹ್ವಾನಿಸಲು ಬಂದಾಗ ಬುದ್ಧನು ತಾನು ಆಮ್ರಪಾಲಿಯ ಮನೆಗೆ ಭಿಕ್ಷೆಗೆ ಹೋಗುವುದಾಗಿ ಹೇಳಿರುವೆನೆಂದು ತನ್ನ ಮಾತನ್ನು ಮೀರುವುದಿಲ್ಲವೆಂದು ತಿಳಿಸುತ್ತಾನೆ. ತಕ್ಷಣ ದೊರೆ ಆಮ್ರಪಾಲಿಯನ್ನು ಕಂಡು ನಾಳೆ ನಮ್ಮಲ್ಲಿಗೆ ಬುದ್ಧಗುರು ಭಿಕ್ಷಕ್ಕೆ ಬರಲಿ ನಿನಗೆ ಬೇಕಾದಷ್ಟು ಹೊನ್ನನ್ನು ಕೊಡುವೆನೆಂದು ಹೇಳಿದಾಗ ಆಕೆ ಅದನ್ನು ನಯವಾಗಿ ತಿರಸ್ಕರಿಸುತ್ತಾಳೆ. ಇದು ಹಣ–ಅಧಿಕಾರದ ನಿರರ್ಥಕತೆಯ ಪ್ರತೀಕವಾಗಿದೆ. ಎಲ್ಲವನ್ನು ಹಣದಿಂದಲೇ ಕೊಂಡುಕೊಳ್ಳಲು ಸಾಧ್ಯವಿಲ್ಲ. ಮಾನಸಿಕ ನೆಮ್ಮದಿ, ಸಂತೋಷ ದೊರೆಯುವುದು ಪ್ರೀತಿಯಿಂದಲೇ ಹೊರತು ಸಂಪತ್ತಿನಿಂದಲ್ಲ. ಅಂತಹ ಪ್ರೀತಿಯ ಚಿಲುಮೆ ಬುದ್ಧನಿಂದ ಆಮ್ರಪಾಲಿಗೆ ದೊರೆಯುತ್ತದೆ. ಅದರ ಮುಂದೆ ಉಳಿದ ಎಲ್ಲಾ ಸಂಪತ್ತು ಶೂನ್ಯವಾಗುತ್ತದೆ. ಈ ಮೂಲಕ ಬುದ್ಧನು ಪ್ರತಿಯೊಬ್ಬ ಜನರ ಬದುಕಿಗೂ ಮಾನ್ಯತೆಯನ್ನು ಕೊಡುತ್ತಿದ್ದ, ಯಾರನ್ನೂ ಕೀಳಾಗಿ ಕಾಣದೆ ಪ್ರತಿಯೊಬ್ಬರಿಗೂ ಮಾನವೀಯತೆಯನ್ನು ತೋರುತ್ತಿದ್ದ, ತಮ್ಮ ಬಗ್ಗೆಯೇ ಕೀಳರಿಮೆ ಹೊಂದಿದ್ದ ಜನರಿಗೆ ಉತ್ತಮ ಬೋಧಕನಾಗಿ ಅವರಲ್ಲಿ ಉತ್ಸಾಹದ ಚಿಲುಮೆಯನ್ನು ತುಂಬುತ್ತಿದ್ದ ಎಂಬುದು ವೇದ್ಯವಾಗುತ್ತದೆ.

ಹೀಗೆ ದೀಕ್ಷಾಕಾಂಡದ ಈ ಭಾಗದಲ್ಲಿ ಎಚ್. ಎಸ್. ವೆಂಕಟೇಶಮೂರ್ತಿ ಅವರು ಬುದ್ಧ ತಾನು ಕಂಡುಕೊಂಡ ಜ್ಞಾನದ ಬೆಳಕನ್ನು ಇತರರಿಗೆ ಹಂಚಿ ಅವರ ಜೀವನವನ್ನು ಉದ್ಧರಿಸುತ್ತಾನೆ. ಬುದ್ಧ ಕಣ್ಮರೆಯಾಗಿ ಸಾವಿರಾರು ವರ್ಷಗಳೇ ಕಳೆದಿದ್ದರೂ ಇಂದಿಗೂ ಆತನ ಮಾತುಗಳು ಬೆಳಕಿನಡೆಗೆ

ಕರೆದೊಯ್ಯುವ ದಿವ್ಯಮಂತ್ರಗಳಾಗಿವೆ. ಆತನ ಕರುಣಾದೃಷ್ಟಿ, ಮಾತೃಹೃದಯ, ಪ್ರೀತಿತುಂಬಿದ ಮಾತು, ಮೃದುಸ್ಪರ್ಶ ಎಂತಹ ಕಲ್ಲೆದೆಯನ್ನೂ ಕರಗಿಸಿ ಪ್ರೀತಿಯ ಒರತೆಯನ್ನು ಚಿಮ್ಮಿಸುವ ಶಕ್ತಿ ಪಡೆದಿದೆ. ಬುದ್ಧ ತಾನು ಕಂಡುಕೊಂಡ ಜ್ಞಾನವನ್ನು ಇತರರಿಗೂ ಉಣಬಡಿಸಿ ಅವರ ಜೀವನವನ್ನು ಹಸನುಗೊಳಿಸಿದ ಪ್ರಸಂಗವೇ ಈ ದೀಕ್ಷಾಕಾಂಡದ ಸಾರವಾಗಿದೆ.

**ಕೊನೆಟಿಪ್ಪಣಿ**

೧. ರಾಮಚಂದ್ರರಾವ್ ಎಸ್.ಕೆ. ವೈಶಾಖ ಪೂರ್ಣಿಮೆ–ಸಂಬೋಧಿಯ ಸಂದರ್ಭ. ಪು.ಸಂ. ೪

೨. ಕೃಷ್ಣಯ್ಯ ಎ.ಡಿ. (ಅ). ಬುದ್ಧ ಮತ್ತು ಆತನ ಧಮ್ಮ. ಪು.ಸಂ. ೧೯೩

೩. ಕೃಷ್ಣಯ್ಯ ಎ.ಡಿ. (ಅ). ಬುದ್ಧ ಮತ್ತು ಆತನ ಧಮ್ಮ. ಪು.ಸಂ. ೧೯೪

೪. ಬರಗೂರು ರಾಮಚಂದ್ರಪ್ಪ. (ಸಂ). ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ. (ಈ ಕೃತಿಯಲ್ಲಿ ಉದ್ಧೃತ). ಪು.ಸಂ. ೧೩

೫. ರಾಮಚಂದ್ರರಾವ್ ಎಸ್.ಕೆ. ವೈಶಾಖ ಪೂರ್ಣಿಮೆ–ಸಂಬೋಧಿಯ ಸಂದರ್ಭ. ಪು.ಸಂ. ೨೩

೬. ಕೃಷ್ಣಯ್ಯ ಎ.ಡಿ. (ಅ). ಬುದ್ಧ ಮತ್ತು ಆತನ ಧಮ್ಮ. ಪು.ಸಂ. ೨೩೮

**ಪರಾಮರ್ಶನ ಗ್ರಂಥಗಳು**

೧. ಕೃಷ್ಣಯ್ಯ ಎ.ಡಿ. (ಅ) : ಬುದ್ಧ ಮತ್ತು ಆತನ ಧಮ್ಮ
ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
ಪ್ರಥಮ ಮುದ್ರಣ–೧೯೯೬

೨. ಬರಗೂರು ರಾಮಚಂದ್ರಪ್ಪ (ಸಂ) : ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ
ಕನ್ನಡ ಸಾಹಿತ್ಯ ಅಕಾಡೆಮಿ
ಬೆಂಗಳೂರು
ಪ್ರಥಮ ಮುದ್ರಣ–೨೦೦೬

| | |
|---|---|
| ೩. ರಾಮಚಂದ್ರರಾವ್ ಎಸ್.ಕೆ. | : ವೈಶಾಖ ಪೂರ್ಣಿಮೆ–ಸಂಬೋಧಿಯ ಸಂದರ್ಭ<br>ಶ್ರೀ ಜಿ ಪಿ ರಾಜರತ್ನಂ ಸಂಸ್ಮರಣ ಸಮಿತಿ<br>ದಕ್ಷಿಣ ಕನ್ನಡ<br>ಪ್ರಥಮ ಮುದ್ರಣ–೧೯೭೯ |
| ೪. ವಸಂತಕುಮಾರ್ ತಾಳ್ತಜೆ | : ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ<br>ವಿನಯ ಪ್ರಕಾಶನ<br>ಬೆಂಗಳೂರು<br>ಪ್ರಥಮ ಮುದ್ರಣ–೧೯೮೮ |
| ೫. ವೆಂಕಟೇಶಮೂರ್ತಿ ಎಚ್.ಎಸ್. | : ಬುದ್ಧ ಚರಣ<br>ಅಂಕಿತ ಪುಸ್ತಕ<br>ಬೆಂಗಳೂರು<br>ಪ್ರಥಮ ಮುದ್ರಣ–೨೦೨೦ |